೩) ರಾಜ್ಯದಾದ್ಯಂತ ಅನುದಾನಿತ ಕಾಲೇಜುಗಳಿಗೆ ವೇತನಾನುದಾನ ಬಿಡುಗಡೆ ಮಾಡುವ ಬಗ್ಗೆ

ಶ್ರೀ ಬಾಬುರಡ್ಡಿ ತುಂಗಳ್ (ಬೀಳಗಿ).—ಕರ್ನಾಟಕ ರಾಜ್ಯದಾದ್ಯಂತ ಅನುದಾನಿತ ಕಾಲೇಜುಗಳ ೧೯೮೫ರ ಜನವರಿಯ ವೇತನಾನುದಾನ ಇದುವರೆವಿಗೂ ಬಿಡುಗಡೆಯಾಗಿಲ್ಲ, ಕೆಲವು ಕಡೆ ಡಿಸೆಂಬರ್ ತಿಂಗಳಿನ ಸಂಬಳವೂ ಬಟವಾಡೆಯಾಗಿಲ್ಲ.

೧೯೭೭ರಿಂದ ಅನುದಾನಿತ ಕಾಲೇಜುಗಳಿಗೆ ರಾಜ್ಯ ಸರಕಾರವೇ ನೇರವಾಗಿ ವೇತನ ನೀಡುತ್ತಾ ಬಂದಿದೆ. ಅದು ಸರ್ಕಾರದ ಹೊಣೆಯೂ ಹೌದು. ಸರಕಾರೀ ಕಾಲೇಜುಗಳ ಉದ್ಯೋಗಿಗಳಿಗೆ ನಿಯಮಿತವಾಗಿ ವೇತನ ಬಿಡುಗಡೆಯಾಗುತ್ತಿದ್ದು, ಅನುದಾನಿತ ಕಾಲೇಜುಗಳಿಗೆ ಮಲತಾಯಿ ಧೋರಣೆಯನ್ನು ಅನುಸರಿಸಲಾಗುತ್ತಿದೆಯೆಂಬ ಭಾವನೆ ಮೂಡಿದೆ. ನಾಲ್ಕು ದಿನ ವೇತನ ಬಟವಾಡೆ ತಡವಾದರೆ ತೊಂದರೆಯಾಗುವ ಇಂದಿನ ದಿನಮಾನಗಳಲ್ಲಿ ಎರಡು-ಮೂರು ತಿಂಗಳಂಗಟ್ಟಿ ಸಂಬಳ ವಿರದಿದ್ದರೆ ನೌಕರರ ಗತಿ ಏನು ? ಸರಕಾರ ಹೀಗೇಕೆ ಅನುದಾನಿತ ಕಾಲೇಜುಗಳ ವಿಷಯದಲ್ಲಿ ತಾತ್ಸಾರ ತಳೆದಿದೆ ?

ವೇತನ ಬಟವಾಡೆಯಲ್ಲಿ ಆಗಿರುವ ವಿಳಂಬದಿಂದಾಗಿ ಅನುದಾನಿತ ಕಾಲೇಜುಗಳ ಸಾವಿರಾರು ನೌಕರರು ಆರ್ಥಿಕವಾಗಿ ಅತ್ಯಂತ ತೊಂದರೆಯಲ್ಲಿದ್ದು, ಯಾವುದೇ ಸರಕಾರ ಅವರು ಮಾನಸಿಕ ಹಿಂಸೆಗೊಳಗಾಗುವುದಕ್ಕೆ ಅಪಕಾಶ ಕೊಡಬಾರದು. ಕಾರಣ ಎರಡು-ಮೂರು ತಿಂಗಳ ವೇತನಾನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮೂಲಕ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಜೀವರಾಜ ಆಳ್ವ.—ಇದರ ಬಗ್ಗೆ ನಂತರ ಉತ್ತರವನ್ನು ತರಿಸಿಕೊಡುತ್ತೇನೆ

4. ಮಂಗಳೂರು ಹಳೇ ಬಂದರಿನ ಬಳಿ ಸಮುದ್ರದಲ್ಲಿ ಹೂಳೆತ್ತುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ)—ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಹಳೆ ಬಂದರು, ಅಳಿವೆ ಬಾಗಿಲಿನಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಹೊಳೆಗೆ ತುಂಬಿ. ಅನೇಕ ಬೋಟುಗಳು, ನೌಕೆಗಳು ಹೊಳೆಗೆ ತಾಗಿ ಮಂಗಳಕ್ಕೆ ಹೆಚ್ಚಾಗಿವೆ. ೧೦ಕ್ಕೂ ಮಿಕ್ಕಿ ಜೀವ ಹಾನಿಯಾಗಿದೆ. ಅಪಾರ ನಷ್ಟ ಆಗಿದೆ. ಈ ವರ್ಷ ಕೂಡ ಬೋಟುಗಳು ಮರಳಿಗೆ ತಾಗಿ ಮುಳುಗಿವೆ. ವಿಾನುಗಾರರು ಭಾರಿ ಕಷ್ಟ ನಷ್ಟಗಳಿಗೆ ಬಳಗಾಗಿರುತ್ತಾರೆ. ಇಲ್ಲಿ ಉಳಿತ್ತುವ ವಿಚಾರ ಬಂದೆರಡು ವರ್ಷಗಳಿಂದ ಹೇಳುತ್ತಾ ಬಂದರೂ, ಇನ್ನೂ ಹೂಳೆತ್ತುವ ಕಾರ್ಯ ಪ್ರಾರಂಭವಾಗಿಲ್ಲ. ಹೂಳೆತ್ತದೆ ಇದ್ದುದರಿಂದ ವಿಾನುಗಾರರಿಗೆ ತುಂಬಾ ತೊಂದರೆ ಒದಗಿದೆ. ಆದ ಕಾರಣ ಮಂಗಳೂರು ಅಳಿವೆ ಪ್ರದೇಶ ಮಲ್ಪೆ ಪ್ರದೇಶದಲ್ಲಿ ಹೂಳೆತ್ತಲು ಪ್ರಾರಂಭ ಮಾಡಲಾಗುವುದೇ ? ಆ ಕಾರ್ಯ ಎಲ್ಲಿಯವರೆಗೆ ಆಗಿದೆ. ಈ ಕುರಿತು ವಿಾನುಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ವಿಾನುಗಾರಿಕೆ ಮತ್ತು ಬಂದರು ಖಾತೆ ಸಚಿವರು).—ರಾಜ್ಯದ ಕರಾವಳಿಯಲ್ಲಿರುವ ಮಂಗಳೂರು ಮತ್ತು ಇನ್ನಿತರ ಬಂದರುಗಳಲ್ಲಿ ಹೂಳೆತ್ತುವ ಕಾರ್ಯ ಕೈಗೊಳ್ಳುವುದು ಅವಶ್ಯಕ. ಹಳೆಯ ಮಂಗಳೂರು ಬಂದರಿನ ಅಳಿವೆಯಲ್ಲಿ ಸೂಕ್ತ ಆಳ ಇಲ್ಲವೆಂದು ಹಲವು ವರ್ಷಗಳಿಂದ ವೆಂಬಲಿಂದ ಮೇಲೆ ಮನವಿಗಳು ಬರುತ್ತಿವೆ. ಈ ಬಗ್ಗೆ ಸರಕಾರವೂ ವಿಶೇಷ ಆಸಕ್ತಿ ವಹಿಸಿದ್ದು ಈ ಬಗ್ಗೆ ವಿವಿಧ ರೀತಿಯ ಯೋಜನೆಗಳನ್ನು ಪರಿಶೀಲಿಸಿದೆ. ಅಳಿವೆಯಲ್ಲಿ ಹೂಳೆತ್ತುವ ಬಗ್ಗೆ ವಿಾನುಗಾರಿಕಾ ಸಂಸ್ಥೆಗಳಿಂದ ಟೆಂಡರುಗಳನ್ನು ಕರೆಯುವ ಪ್ರಯತ್ನವನ್ನು ಮಾಡಲಾಯಿತು. ಕೇರಳ ರಾಜ್ಯದ ಹೂಳೆತ್ತುವ ಯಂತ್ರವನ್ನು ಉಪಯೋಗಿಸಲು ಪ್ರಯತ್ನಿಸಲಾಯಿತು. ಈ ಸಂಬಂಧದಲ್ಲಿ ರಾಜ್ಯ ಸರ್ಕಾರದ ವತಿಯಿಂದ ವಿಾನುಗಾರರ ಮುಖಂಡರ ಸಮಿತಿಯೊಳಗೆ ಕೇರಳ ರಾಜ್ಯಕ್ಕೆ ಭೇಟಿ ಕೊಡಲಾಯಿತು. ಈ ಕೆಲಸವನ್ನು ಕೈಗೆತ್ತಿಕೊಳ್ಳಲು ಕೇರಳದ ಹೂಳೆತ್ತುವ ಯಂತ್ರವು ಸೂಕ್ತ ಕಂಡು ಬರಲಿಲ್ಲ. ಆದೇ ಸಮಯದಲ್ಲಿ ಮುಂಬೈಯ ಕಂಪನಿಯ ವತಿಯಿಂದಲಾದರೂ ಅಳಿವೆಯಲ್ಲಿ ಹೂಳೆತ್ತುವ ಕಾರ್ಯವನ್ನು ಮಾಡಿಸಲು ಸತತ ಪ್ರಯತ್ನ ಹಟ್ಟರೂ ಆ ಕಂಪನಿಯವರ ಒಪ್ಪಲಾಗದಂತಹ ಕೆಲವು ಷರತ್ತುಗಳು ಕಾರಣ ಕೆಲಸವನ್ನು ಅವರಿಗೆ ಒಪ್ಪಿಸಲಾಗಲಿಲ್ಲ.